ಶ್ರೀ ವಾಟಾಳ್ ನಾಗರಾಜ್.—ಅವರು ಹೇಳುತ್ತಾ ಇರುವ ಹೆಸರುಗಳು ನಮ್ಮ ರಾಜ್ಯದಲ್ಲಿ ಯಾವುದೂ ಇಲ್ಲವೇನೂ ಎಂದು ನನಗೆ ಅನ್ನಿಸುತ್ತದೆ. ಐಹೊಳ್ ಅಂತ, ಐಹೊಳೆ ಎಲ್ಲಿದೆಯೋ ನಮಗಂತೂ ಗೊತ್ತಿಲ್ಲ. ನಾನು ತಿಳಿದಿರುವುದು ಐಹೊಳೆ, ಐಹೊಳ್ ಎಲ್ಲಿದೆಯೊ ಗೊತ್ತಿಲ್ಲಿ. ಪಟ್ಟದಕಲ್ ಅಂದರೆ ಯಾವ ಭಾಷೆ ಇವರದು. ಏನು ಇಷ್ಟು ತೀರ.....

ಶ್ರೀ ಬಿ. ಶಿವಣ್ಣ.—ಐಹೊಳೆ, ಪಟ್ಟದಕಲ್ಲು, ಶಿರಾಡಿಘಾಟ್, ಹಿರಿಯೂರು, ಪಿರಿಯಾಪಟ್ಟಣ, ಕೂಡ್ಲಿಗಿ, ಗದಗ್, ಲಿಂಗಸೂಗೂರು, ಶಹಪುರ್, ಹುನಗುಂದ್, ಮಡಿಕೇರಿ, ಮೇಲುಕೋಟೆ, ಸೋಮನಾಥಪುರ, ಶೃಂಗೇರಿ, ಬೆಂಗಳೂರು, ಶ್ರೀರಂಗಪಟ್ಟಣ, ಕಲ್ಕುಟಗಿ.....

ಶ್ರೀ ಎಂ. ವಿ. ವೆಂಕಟಪ್ಪ.—ದಕ್ಷಿಣ ವಲಯದಲ್ಲಿ ಕೋಲಾರದ ಚಿನ್ನದಗಣಿ, ನಂದಿಬೆಟ್ಟ, ಮುಳಬಾಗಿಲನ್ನು ಬಿಟ್ಟಿದ್ದಾರೆ. ಇದಕ್ಕೆ ಕಾರಣವೇನು? ಮುಂದೆ ಏನಾದರೂ ಇವುಗಳನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೀರಾ?

ಶ್ರೀ ಬಿ. ಶಿವಣ್ಣ.—ಸೇರಿಸೋಣ.

ಶ್ರೀಮತಿ ದಮಯಂತಿ ಬೋರೇಗೌಡ.—ರಾಜ್ಯದಲ್ಲಿ ಅತ್ಯಂತ ಹೆಚ್ಚಿನ ಪ್ರವಾಸಿಗರು ಬರುವುದು ಶ್ರೀರಂಗಪಟ್ಟಣಕ್ಕೆ ಅದನ್ನು ಏತಕ್ಕೆ ಸೇರಿಸಿಲ್ಲ? ಅಲ್ಲಿ ಪ್ರವಾಸಿಗರಿಗೆ ಏನೇನೂ ಅನುಕೂಲವಿಲ್ಲ ಎನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ?

ಶ್ರೀ ಬಿ. ಶಿವಣ್ಣ.—ಅದು ಸೇರಿದೆ.

ಅಧ್ಯಕ್ಷರು.—ಅವರು ಹೈದರಾಬಾದ್ ಪ್ರಾಂತ್ಯದ ಕನ್ನಡ ವಾತಾವರಣದ ಬಗ್ಗೆ ಮಾತನಾಡುತ್ತಿದ್ದಾರೆ. ಶ್ರೀರಂಗಪಟ್ಟಣ ಸೇರಿದೆ.

ಶ್ರೀ ಎಂ. ವಿ. ವೆಂಕಟಪ್ಪ.—ವಿದೇಶಿ ಪ್ರವಾಸಿಗರಿಗೆ ಟ್ಯಾಕ್ಸ್ ಫ್ರೀ ಪೋರ್ಟ್ ಮತ್ತು ಟ್ಯಾಕ್ಸ್ ಫ್ರೀ ಏರ್‌ಪೋರ್ಟ್ ಇರುತ್ತದಲ್ಲ, ಆ ರೀತಿ ಟ್ಯಾಕ್ಸ್ ಫ್ರೀ ಯಾವುದಾದರೂ ಟೂರಿಸ್ಟ್ ಪ್ಲೇಸಸ್ ನೀವು ಮಾಡುವುದಕ್ಕೆ ಅನುಕೂಲ ಆಗುತ್ತದೆಯೇ?

ಅಧ್ಯಕ್ಷರು.—ಯಾವ ಟ್ಯಾಕ್ಸ್ ಫ್ರೀ?

ಶ್ರೀ ಎಂ. ವಿ. ವೆಂಕಟಪ್ಪ.—ಲಿಕ್ಕರ್, ಟ್ಯಾಕ್ಸ್ ಫ್ರೀ ಸಾಮಾನುಗಳನ್ನು ಕೊಂಡು ಕೊಳ್ಳುವುದಕ್ಕೆ ಟ್ಯಾಕ್ಸ್ ಫ್ರೀ ಇರುತ್ತದೆ. ಲೋಕಲ್ ಡ್ಯೂಟಿ ಫ್ರೀ ಇರುತ್ತದೆ.

ಶ್ರೀ ಬಿ. ಶಿವಣ್ಣ.—ಡ್ಯೂಟಿ ಫ್ರೀ ಆಗುವುದಿಲ್ಲ.

ಶ್ರೀ ವಾಟಾಳ್ ನಾಗರಾಜ್.—ವಿದೇಶಿ ಪ್ರವಾಸಿಗರಿಗೆ ತಾವು ಯಾವ ರೀತಿ ಮದ್ಯಪಾನಗಳನ್ನು ಕೊಡುತ್ತೀರಿ? ಅದು ಯಾವು ಯಾವುದು,

ಶ್ರೀ ಬಿ. ಶಿವಣ್ಣ.—ಪ್ರೊಹಿಬಿಷನ್ ಇಲ್ಲ ಅಂದ ಮೇಲೆ ಕೊಡಂವ ಪ್ರಶ್ನೆ ಬರುವುದಿಲ್ಲ.

ಶ್ರೀ ಹೆಚ್. ಎಂ. ರೇವಣ್ಣ.—ಬೆಂಗಳೂರು ಜಿಲ್ಲೆಯ ವಾಗಡಿ ತಾಲ್ಲೂಕಿನಲ್ಲಿರುವ ಸಾವನದುರ್ಗ ಒಂದು ಪ್ರೇಕ್ಷಣೀಯ ಸ್ಥಳವಾಗಿದೆ. ಈ ಸಾರಿ ಅದಂ ಸೇರಿಲ್ಲ. ಅದನ್ನು ಸೇರಿಸುವುದಕ್ಕೆ ಏನಾದರೂ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಬಿ. ಶಿವಣ್ಣ.—ಅದನ್ನು ಸೇರಿಸುವುದಕ್ಕೆ ಪ್ರಯತ್ನ ಮಾಡುತ್ತೇನೆ.

ಶ್ರೀ ಹೆಚ್. ಎಸ್. ಕೌಜಲಗಿ.—ಉತ್ತರ ಕರ್ನಾಟಕದಲ್ಲಿ ಶ್ರೀಕ್ಷೇತ್ರ ಸೊಗಲೂರು ಸಹ ಒಂದು ಪ್ರವಾಸಿಗರ ಕೇಂದ್ರವಿದೆ. ಅದನ್ನು ಸಹ ಈ ಯೋಜನೆಯಲ್ಲಿ ಸೇರಿಸಬೇಕೆಂದು ನಾನು ತಮ್ಮನ್ನು ಕೇಳಿಕೊಳ್ಳುತ್ತಾ ಇದ್ದೇನೆ.

ಪುತ್ತೂರು ತಾಲ್ಲೂಕಿನ ಕೋರ್ಟು ಕಟ್ಟಡದ ಬಗ್ಗೆ

೧೫೩. ಶ್ರೀ ವಿನಯ ಕುಮಾರ್ ಸೊರಕೆ (ಪುತ್ತೂರು).—ಪ್ರವಾಸ್ಯ ಯೋಜನಾ, ಕಾನೂನು, ಸಂಸದೀಯ ವ್ಯವಹಾರಗಳು ಹಾಗೂ ಪ್ರವಾಸೋದ್ಯಮ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

(ಅ) ಪುತ್ತೂರು ತಾಲ್ಲೂಕಿನ ಪುರಾತನ ಕೋರ್ಟು ಕಟ್ಟಡ ಬಿದ್ದಿರುವುದು ಸರ್ಕಾರದವರ ಗಮನಕ್ಕೆ ಬಂದಿದೆಯೇ?

(ಅ) ಹಾಗಿದ್ದಲ್ಲಿ, ಇದರ ಸುಧಾರಣೆ ಬಗ್ಗೆ ಏನು ಕ್ರಮಕ್ಕೆಗೊಳ್ಳಲಾಗಿದೆ?

(ಇ) ಪುತ್ತೂರಿನಲ್ಲಿ ಹೊಸ ಕೋರ್ಟು ಕಟ್ಟಡವನ್ನು ಪೂರ್ಣಗೊಳಿಸಲು ಎಷ್ಟು ಕಾಲಾವಕಾಶ ಬೇಕಾಗಬಹುದು?

ಶ್ರೀ ಎಂ. ವೀರಪ್ಪ ಮೊಯ್ಲಿ (ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು)—

(ಅ) ಹೌದು.

(ಆ) ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ನ್ಯಾಯಾಧೀಶರನ್ನು ಪುತ್ತೂರಿನಲ್ಲಿರುವ ನ್ಯಾಯಾಲಯಗಳು ಇರಲು ಪರ್ಯಾಯ ಕಟ್ಟಡಗಳನ್ನು ಹುಡುಕುವಂತೆ ಕೋರಲಾಗಿದೆ.

(ಇ) ಪುತ್ತೂರಿನಲ್ಲಿ ಹೊಸ ನ್ಯಾಯಾಲಯ ಸಂಕೀರ್ಣವನ್ನು ಕಟ್ಟುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ.

ಶ್ರೀ ವಿನಯಕುಮಾರ್ ಸೊರಕೆ.—ಪುತ್ತೂರು ತಾಲ್ಲೂಕಿನ ಪುರಾತನ ಕೋರ್ಟ್ ಕಟ್ಟಡ ಬಿದ್ದಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ ಎಂಬ ಪ್ರಶ್ನೆ ಕೇಳಿದಾಗ, ಸರ್ಕಾರದವರು ಹೌದು ಎಂದು ಉತ್ತರ ಕೊಟ್ಟಿದ್ದಾರೆ. ಇದನ್ನು ಪೂರ್ತಿಗೊಳಿಸಲಿಕ್ಕೆ ಏನು ಕಾರ್ಯಕ್ರಮ ಹಾಕಿಕೊಂಡಿದ್ದೀರಿ, ಎಂದು ಕೇಳಿದ್ದಕ್ಕೆ ದಕ್ಷಿಣ ಕನ್ನಡ ಜಿಲ್ಲೆಯ ಜಿಲ್ಲಾ ನ್ಯಾಯಾಧೀಶರನ್ನು ಪುತ್ತೂರಿನಲ್ಲಿರುವ ನ್ಯಾಯಾಲಯಗಳು ಇರಲು ಪರ್ಯಾಯ ಕಟ್ಟಡಗಳನ್ನು ಹುಡುಕುವಂತೆ ಕೋರಲಾಗಿದೆ ಎಂದು ಹೇಳಿದ್ದಾರೆ.

ಮಾನ್ಯ ಅಧ್ಯಕ್ಷರೆ ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ನ್ಯಾಯಾಂಗ ಕೂಡ ಅತಿ ಮಹತ್ವವಾದಂಥಾದ್ದು ಇವೊತ್ತೂ ಪುತ್ತೂರು ಸಬ್ ಡಿವಿಜನ್ ಸೆಂಟರ್‌ನಲ್ಲಿರುವಂಥ ಒಂದು ನ್ಯಾಯಾಲಯದ ಕಟ್ಟಡ ಕುಸಿದು ಬಿದ್ದು ಹೋಗಿರುವಂಥ ಸಂದರ್ಭದಲ್ಲಿ, ನ್ಯಾಯಾಲಯ ಈಗ ಬರೀ ಬಾರ್ ರೂಮ್‌ನಲ್ಲಿ ನಡೆಯುವಂಥ ಅವಕಾಶ ಇದೆ. ಇದರ ಸುಧಾರಣೆಗೆ ಏನು ಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಕೇಳಿದ್ದಕ್ಕೆ, ಪುತ್ತೂರಿನಲ್ಲಿ ಹೊಸ ನ್ಯಾಯಾಲಯ ಸಂಕೀರ್ಣವನ್ನು ಕಟ್ಟುವ ವಿಷಯವು ಸರ್ಕಾರದ ಪರಿಶೀಲನೆಯಲ್ಲಿದೆ ಎಂದು ಹೇಳಿದ್ದಾರೆ. ಈಗ ಅಲ್ಲಿ ಸಧ್ಯಕ್ಕೆ ಬೇಸಿಗೆ ಕಾಲದಲ್ಲಿ ಬಾರ್ ರೂಮ್‌ನಲ್ಲಿ ನ್ಯಾಯಾಲಯ ನಡೆಯುವಂಥ ಅವಕಾಶ ಇದೆ. ಇನ್ನು ನ್ಯಾಯಾಲಯವನ್ನು ಸ್ಥಗಿತಗೊಳಿಸುವಂತೆ ಅವಕೇಶ ಕೂಡ ಇದೆ. ಈ ಹಂತದಲ್ಲಿ ಪರಿಶೀಲನೆಯಿಂದ ಯಾವುದೇ ರೀತಿಯ ಕಾರ್ಯಕ್ರಮ ಆಗುವುದಿಲ್ಲ. ಸ್ಪಷ್ಟವಾಗಿ ಮಾನ್ಯ ಮಂತ್ರಿಗಳು ಉತ್ತರ ಕೊಡಬೇಕು. ಏನು ಕಾರ್ಯಕ್ರಮವನ್ನು ಹಮ್ಮಿಕೊಂಡಿದ್ದೀರಿ ಎಂದು ಪುತ್ತೂರಿನಲ್ಲಿ ಹೊಸ ನ್ಯಾಯಾಲಯ ಸಂಕೀರ್ಣ ಕಟ್ಟಲಿಕ್ಕೆ ಏನು ಕಾರ್ಯಕ್ರಮ ಹಮ್ಮಿಕೊಂಡಿದ್ದೀರಿ ಎನ್ನುವುದಕ್ಕೆ ಸ್ಪಷ್ಟ ಉತ್ತರ ಕೊಡಬೇಕು ಎಂದು ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ (ಶ್ರೀ ಎಂ. ವೀರಪ್ಪ ಮೊಯ್ಲಿಯವರ ಪರವಾಗಿ),—ಪುತ್ತೂರಿನ ಕೋರ್ಟ್ ಕಟ್ಟಡವನ್ನು ಕಟ್ಟುವ ಬಗ್ಗೆ ಸರ್ಕಾರ ಶೀಘ್ರದಲ್ಲಿಯೇ ಸೂಕ್ತ ಕ್ರಮವನ್ನು ಕೈಗೊಳ್ಳಲು ಪರಿಶೀಲಿಸುತ್ತದೆ. ಈಗ ಅಲ್ಲಿ ಪರ್ಯಾಯ ಕಟ್ಟಡಗಳನ್ನು ಹುಡುಕುವಂತೆ ಕೇಳಿಕೊಂಡಿದ್ದೇವೆ, ಹುಡುಕುತ್ತಾ ಇದ್ದಾರೆ.

ಶ್ರೀ ವಿನಯಕುಮಾರ್ ಸೊರಕೆ.—ನನ್ನ ತಿಳುವಳಿಕೆಯ ಪ್ರಕಾರ, ಆ ಒಂದು ಕಾರ್ಯಕ್ಕಾಗಿ ಮೂರನೆಯ ಒಂದು ಭಾಗ ಗ್ರಾಂಟ್ ಕೂಡ ಈ ಸಲಕ್ಕೆ ಇಟ್ಟಿಲ್ಲ. ಅದಕ್ಕಾಗಿ ೧೦ ಲಕ್ಷ ರೂಪಾಯಿಗಳ ಗ್ರಾಂಟ್‌ನ್ನು ಏನು ಇಡುತ್ತೀರಿ ಎನ್ನುವುದು ನಮ್ಮ ಗಮನಕ್ಕೆ ಬಂದಿದೆ. ಆದು ೧೨ ಲಕ್ಷ ರೂಪಾಯಿಗಳನ್ನು ಇಡದೆ ಕೂಡ ಮೂರನೆ ಒಂದರಷ್ಟು ಗ್ರಾಂಟ್ ಕೂಡ ಆಗುವುದಿಲ್ಲ. ಇದರಿಂದ ಕಟ್ಟಡದ ಕೆಲಸ ಪ್ರಾರಂಭ ಮಾಡುವುದಕ್ಕೆ ಆಗುವುದಿಲ್ಲ. ಆದುದರಿಂದ ಕೂಡಲೆ ಆದಕ್ಕೆ ಬೇಕಾಗುವಂಥ ಮೂರನೇ ಒಂದು ಭಾಗದ ಗ್ರಾಂಟ್ ಇಟ್ಟು ಕೂಡಲೆ ಕೆಲಸವನ್ನು ಪ್ರಾರಂಭ ಮಾಡಲಿಕ್ಕೆ ಅವಕಾಶ ಮಾಡಿಕೊಡುತ್ತೀರಾ ಎಂದು ತಮ್ಮ ಮುಂಖಾಂತರ ಕೇಳಿಕೊಳ್ಳುತ್ತೇನೆ.

ಶ್ರೀ ಬಿ. ಶಿವಣ್ಣ.——ಮಾನ್ಯ ಸದಸ್ಯರು ಹೇಳಿದ ವಿಚಾರವನ್ನು ಸರಕಾರ ಪರಿಶೀಲಿಸಿ ಮಾಡುತ್ತದೆ.